(9) ಖಾದಿ ಗ್ರಾಮೋದ್ಯೋಗದ ಅಡಿ ಬರುವಂತಹ ಗಾಣದ ಕೈಗಾರಿಕೆ ಮೇಲೆ ಮಾರಾಟ ತೆರಿಗೆ ವಿಧಿಸಿರುವುದರಿಂದ ವಿಜಾಪುರ ಜಿಲ್ಲೆಯ 5-6 ಸಾವಿರ ಕುಟುಂಬಗಳು ನಿರಾಶ್ರಿತರಾಗುವಂತಹ ಪರಿಸ್ಥಿತಿ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, 1998ರ ಬಜೆಟ್ ಮಂಡನೆ ಕಾಲದಲ್ಲಿ ಮಾರಾಟ ತೆರಿಗೆ ಕಾಯಿದೆ 1957 ನಿಯಮ 25 ಎರಡಿಯಯ 5ನೇ ಅನುಸೂಚಿಯಲ್ಲಿ ಬರುವಂತಹ ವಿಶೇಷವಾಗಿ ಖಾದಿ ಗ್ರಾಮೋದ್ಯೋಗದ ಅಡಿ ಬರುವಂತಹ ಗಾಣದ ಕೈಗಾರಿಕೆಗಳ ಮೇಲೆ ಇವತ್ತು ಮಾರಾಟ ತೆರಿಗೆಯನ್ನು ವಿಧಿಸುವಂತಹ ಒಂದು ವ್ಯವಸ್ಥೆಯನ್ನು ತಂದಿರುವುದರಿಂದ ವಿಜಾಪುರ ಜಿಲ್ಲೆಯ ಸುಮಾರು 5-6 ಸಾವಿರ ಕುಟುಂಬಗಳು ನಿರಾಶ್ರಿತರಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಾತ್ಮಾ ಗಾಂಧಿಯವರು ಗುಡಿ ಕೈಗಾರಿಕೆಗಳ ಬಗ್ಗೆ ಏನು ವಿಶೇಷವಾದಂತಹ ಒಂದು ಕನಸಿನ ಕೂಸಾಗಿತ್ತು, ಇವತ್ತು ಸರ್ಕಾರ ಈ ಒಂದು ನಿಯಮ ತಂದಿರುವುದರಿಂದ ಈ ಇಡೀ ಒಂದು ಗಾಣಿಗ ಸಮಾಜದ ಮೇಲೆ ದೊಡ್ಡ ಅನ್ಯಾಯವಾಗಿದೆ. ದಯವಿಟ್ಟು ಸರ್ಕಾರ ಮೊದಲಿನಂತೆ 1957 ನಿಯಮ 25(ಎ)ರ ಅಡಿಯಲ್ಲಿ ಬರುವಂತಹ 5ನೇ ಅನುಸೂಚಿಯಲ್ಲಿ ಇರುವಂತಹ ಪುನರ್‌ರಚನೆ ಮಾಡಲಿರುವುದನ್ನು ಕೈಬಿಡಲಿ ಎಂದು ಅನುಕ್ರಮ 25 ಮತ್ತು 28ನ್ನು ಮೊದಲನೇ ರೀತಿಯಲ್ಲಿ ಮುಂದುವರೆಸಬೇಕು ಎಂದು ಒತ್ತಾಯ ಮಾಡುವುದಕ್ಕೆ ಇವತ್ತು ವಿಜಾಪುರ ಜಿಲ್ಲೆಯ ಸುಮಾರು 5-6 ಸಾವಿರ ಜನರ ಪ್ರತಿನಿಧಿಗಳು ಬೆಂಗಳೂರು ನಗರಕ್ಕೆ ಬಂದಿದ್ದಾರೆ. ದಯವಿಟ್ಟು ಸನ್ಮಾನ್ಯ ಉಪಮುಖ್ಯಮಂತ್ರಿಗಳು, ಹಣಕಾಸಿನ ಸಚಿವರು ಈ ಒಂದು ಗುಡಿ ಕೈಗಾರಿಕೆಯನ್ನು ಪ್ರೋತ್ಸಾಹಿಸಲು ಹಾಗೂ ಈ ಒಂದು ಕಾನೂನನ್ನು ಕೈಬಿಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತೆರಿಗೆಯನ್ನು ಹಾಕಿದ್ದೀರಿ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಮಾಹಿತಿ ತರಿಸಿ ಕ್ಲಾರಿಫಿಕೇಷನ್ ಕೊಡಿಸುತ್ತೇವೆ.

10) ವಿಟ್ಲ ಕ್ಷೇತ್ರದಲ್ಲಿ ರಿಂಗ್ ರಸ್ತೆ.

ಶ್ರೀ ಎ.ರುಕ್ಕಯ್ಯ ಪೂಜಾರಿ: ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಟ್ಲ ಪೇಟೆಬಹಳ ಹಳೆಯದು. ಅದು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಿದೆ. ಅದರಿಂದಾಗಿ ಅದು ವ್ಯಾಪಾರ ಕೇಂದ್ರವಾಗಿ ಕೂಡ ಬೆಳೆಯುತ್ತಿದೆ. ಇದರಿಂದ ವಾಹನ ಹಾಗೂ ಜನ ಸಂಚಾರ ಜಾಸ್ತಿಯಾದ ಕಾರಣ ಅಲ್ಲಿ ಅದಕ್ಕೆ ಸರಿಯಾಗಿ ರಸ್ತೆಗಳು ಅಗಲ ಇಲ್ಲದ ಕಾರಣ ಅಲ್ಲಿ ಆಗಾಗ ಬ್ಲಾಕ್ ಆಗುತ್ತಿದೆ. ಇದರಿಂದ ಜನರಿಗೆ ತುಂಬಾ ತೊಂದರೆಯಗುತ್ತಿದೆ. ಅದಕ್ಕಾಗಿ ಈ ಹಿಂದೆ ಕೂಡ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ಒಂದು ರಿಂಗ್ ರಸ್ತೆ ಮಾಡಬೇಕು ಮತ್ತು ಅದಕ್ಕಾಗಿ ಅದಷ್ಟು ಬೇಗ